ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ, ದೇವದುರ್ಗ.

**ಸಿ ಸಿ ನಂ.45/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ, ಜಾಲಹಳ್ಳಿ.

– ವಿರುದ್ಧ –

ಆರೋಪಿಃ ಸಾಮಪ್ಪ @ ಸೋಮಣ್ಣ ತಂದೆ ಸಂಗಪ್ಪ,
ವಯಸ್ಸು: 25 ವರ್ಷಗಳು, ಉಃ ಒಕ್ಕಲುತನ,
ವಾಸಃ ಗೌಡೇರದೊಡ್ಡಿ, ಕಕ್ಕೇರ, ತಾಃ ಸುರಪುರ.

**ದೋಷಾರೋಪಣೆ**

ನಾನು ಸುರೇಶ ಅಣ್ಣಪ್ಪ ಸವದಿ, ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ದೇವದುರ್ಗ, ಈ ಮೂಲಕ ಆರೋಪಿತರಾದ ನಿಮ್ಮ ಮೇಲೆ ಈ ಕೆಳಗಿನಂತೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 24.10.2024 ರಂದು ಸಂಜೆ 06.30 ಗಂಟೆ ಸಮಯದಲ್ಲಿ ಈ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಜಾಲಹಳ್ಳಿ ಪೊಲೀಸ ಠಾಣೆ ಹದ್ದಿನ ಪೈಕಿ ಜಾಲಹಳ್ಳಿ-ತಿಂಥಣಿ ಬ್ರೀಜ್ ಮುಖ್ಯ ರಸ್ತೆಯ ಅಯ್ಯಪ್ಪ ಸ್ವಾಮಿ ಮಠದ ಹತ್ತಿರ ಆರೋಪಿತರಾದ ನೀವು ನಿಮ್ಮ ಮೊಟಾರ್ ಸೈಕಲ್ ನಂ.ಕೆ.ಎ-33 ಇ.ಬಿ-3471 ನೇದ್ದನ್ನು ಸಾರ್ವಜನಿಕ ರಸ್ತೆಯ ಮೇಲೆ ಅತಿವೇಗ ಮತ್ತು ಅಲಕ್ಷತನದಿಂದ ಚಲಾಯಿಸಿ ನಿಯಂತ್ರಣ ಮಾಡದೆ ರಸ್ತೆಯಲ್ಲಿ ಮುಂದೆ ಕುರಿಗಳನ್ನು ಹೊಡೆದುಕೊಂಡು ಹೋಗುತ್ತಿದ್ದ ಹನುಮಂತನಿಗೆ ಹಿಂಬದಿಯಿಂದ ಅಪಘಾತ ಪಡಿಸಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.281 ಕಾಯ್ದೆ ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅತಿವೇಗ ಮತ್ತು ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ವಾಹನ ಚಾಲನೆ ಮಾಡಿ ಅಪಘಾತವನ್ನುಂಟು ಮಾಡಿದ್ದರಿಂದ ಆರೋಪಿತರಾದ ನಿಮ್ಮ ತಲೆಗೆ ಮತ್ತು ಬಲಗಣ್ಣಿಗೆ ಮೇಲೆ ಭಾರಿ ರಕ್ತಗಾಯ ಮಾಡಿ ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.125(ಬಿ) ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ಅತಿವೇಗ ಮತ್ತು ಅಲಕ್ಷತನದಿಂದ ಮಾನವ ಜೀವಕ್ಕೆ ಅಪಾಯವಾಗುವ ರೀತಿಯಲ್ಲಿ ವಾಹನ ಚಾಲನೆ ಮಾಡಿ ಅಪಘಾತವನ್ನುಂಟು ಮಾಡಿದ್ದರಿಂದ ಹನುಮಂತ ಇವರಿಗೆ ಭಾರಿ ಸ್ವರೂಪದ ರಕ್ತಗಾಯ, ಬಲಮಲಕಿಗೆ ಮತ್ತು ಹಣೆಗೆ ತೆರಚಿದ ಗಾಯ ಹಾಗೂ ಎಡಗಾಲಿನ ಹೆಬ್ಬೆರಳಿಗೆ ಭಾರಿ ರಕ್ತಗಾಯವಾಗಿ ಮೃತಪಟ್ಟಿದ್ದು ಆ ಮೂಲಕ ಭಾರತೀಯ ನ್ಯಾಯ ಸಂಹಿತಾ ಕಲಂ.106 ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಮೋಟಾರ್ ಸೈಕಲ್‌ನ್ನು ಚಾಲನಾ ಪರವಾನಿಗೆ ಇಲ್ಲದೇ ಚಾಲನೆ ಮಾಡಿ ಆ ಮೂಲಕ ಭಾರತೀಯ ಮೋಟಾರ ವಾಹನ ಕಾಯ್ದೆ ಕಲಂ.181 ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಮೇಲೆ ಹೇಳಿದ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ ಆರೋಪಿತರಾದ ನೀವು ನಿಮ್ಮ ಮೋಟಾರ್ ಸೈಕಲ್‌ನ್ನು ಹೆಲ್ಮೇಟ್ ಧರಿಸದೆ ಚಾಲನೆ ಮಾಡಿ ಆ ಮೂಲಕ ಭಾರತೀಯ ಮೋಟಾರ ವಾಹನ ಕಾಯ್ದೆ ಕಲಂ.177 ಅಡಿಯಲ್ಲಿ ಅಪರಾಧ ಮಾಡಿರುವಿರಿ.

ಸದರಿ ಅಪರಾಧಗಳು ಈ ನ್ಯಾಯಾಲಯದ ಸಂಜ್ಞೆಯಲ್ಲಿ ಬರುತ್ತವೆ ಮತ್ತು ಸದರೀ ವಿಚಾರಣೆಯು ನನ್ನ ಸಮಕ್ಷಮ ನಡೆಯಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

(ಈ ಆರೋಪಣೆಯನ್ನು ಈ ದಿನ ದಿನಾಂಕಃ 25.09.2025 ರಂದು ಆರೋಪಿತರಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆವರ ಉತ್ತರಗಳನ್ನು ಯಥಾವತ್ತಾಗಿ ದಾಖಲಿಸಿದೆ)

ಓ. ಹೇ. ಕೇ. ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್ ಸಿ
ದೇವದುರ್ಗ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ದೇವದುರ್ಗ ರವರ ನ್ಯಾಯಾಲಯ,
ದೇವದುರ್ಗ.

**ಸಿ ಸಿ ನಂ.45/2025**

ಪಿರ್ಯಾದುದಾರರು : ಕರ್ನಾಟಕ ರಾಜ್ಯ,
ಜಾಲಹಳ್ಳಿ ಪೊಲೀಸ ಠಾಣೆ, ಜಾಲಹಳ್ಳಿ.

– ವಿರುದ್ಧ –

ಆರೋಪಿಃ ಸಾಮಪ್ಪ @ ಸೋಮಣ್ಣ ತಂದೆ ಸಂಗಪ್ಪ,
ವಯಸ್ಸು: 25 ವರ್ಷಗಳು, ಉಃ ಒಕ್ಕಲುತನ,
ವಾಸಃ ಗೌಡೇರದೊಡ್ಡಿ, ಕಕ್ಕೇರ, ತಾಃ ಸುರಪುರ.

1. ನಿಮಗೆ ಓದಿ ಹೇಳಿದ ದೋಷಾರೋಣೆಗಳು ಅರ್ಥವಾಯಿತೇ ?

ಆರೋಪಿ ಉತ್ತರಃ

2. ನೀವು ತಪ್ಪು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕಾ ?

ಆರೋಪಿ ಉತ್ತರಃ

ಮೇಲಿನ ಹೇಳಿಕೆಯನ್ನು ಆಪಾದಿತರಿಗೆ ಓದಿ ಹೇಳಿ ತಿಳಿಸಿ ಅವರ ಹೇಳಿಕೆ ಪಡೆದುದಾಗಿ ದೃಢಿಕರಿಸಿರುತ್ತೇನೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ
ದೇವದುರ್ಗ.